# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆ) ರವರ ಕಛೇರಿ, ಕೇಂದ್ರ ಕಛೇರಿ ಆವರಣ, ಎನ್.ಆರ್. ವೃತ್ತ, ಬೆಂಗಳೂರು-560002.

ಸಂಖ್ಯೆ: ವಿಆ/ಅ.ಪ.ಹ.ವೈ.ನಿ/ಪಿಆರ್/ /2024-25 ದಿನಾಂಕ:28-10-2024

## ಪತ್ರಿಕಾ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1280 ಉದ್ಯಾನವನಗಳನ್ನು ಮತ್ತು ವೃತ್ತ/ಮೀಡಿಯನ್ಸ್ ಗಳನ್ನು ಸಹ ಪಾಲಿಕೆ ವತಿಯಿಂದ ಅಭಿವೃದ್ಧಿಪಡಿಸಿ ನಿರ್ವಹಣೆ ಮಾಡಲಾಗುತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಮ್ಮ ಬೆಂಗಳೂರು ನನ್ನ ಕೊಡುಗೆ ಮತ್ತು ಸಿಎಸ್ಆರ್ ಪಾಲಿಸಿ ಯೋಜನೆಯಡಿಯಲ್ಲಿ ಉದ್ಯಾನವನಗಳು, ರಸ್ತೆ ವಿಭಜಕಗಳು ಮತ್ತು ವೃತ್ತಗಳನ್ನು ಆಸಕ್ತ ಖಾಸಗಿ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳಿಗೆ ದತ್ತು ಪಡೆದುಕೊಳ್ಳಲು ನೋಂದಾಯಿಸುವ ಅವಕಾಶ ಕಲ್ಪಿಸಲಾಗಿದೆ. ಪಾಲಿಸಿಗಳ ವಿವರವನ್ನು **https://www.bbmp.gov.in** ವೆಬ್‌ಸೈಟ್ ಮೂಲಕ ಪಡೆಯ ಬಹುದಾಗಿರುತ್ತದೆ.

ಮುಂದುವರೆದು, ಇತ್ತೀಚೆಗೆ ಹಲವಾರು ನಾಗರೀಕ ಗುಂಪುಗಳು (Citizens Group) ಮತ್ತು ಸರ್ಕಾರೇತರ ಸಂಸ್ಥೆಗಳು ಪಾಲಿಕೆಯನ್ನು ಸಂಪರ್ಕಿಸಿ ಉದ್ಯಾನವನಗಳ/ವೃತ್ತಗಳ/ಮೀಡಿಯನ್ಸ್ ಗಳ ನಿರ್ವಹಣೆ/ಅಭಿವೃದ್ಧಿಯನ್ನು ಮಾಡಲು ಆಸಕ್ತರಾಗಿ ಮುಂದೆ ಬಂದಿರುತ್ತಾರೆ. ಆದ್ದರಿಂದ ಆಸಕ್ತ ಸಂಸ್ಥೆಗಳಿಗೆ **Community involvement for Park Conservation Policy CIPC-2024, CSR** ಅಡಿಯಲ್ಲಿ ಹಾಗೂ **ನಮ್ಮ ಬೆಂಗಳೂರು - ನನ್ನ ಕೊಡುಗೆ** ಅಡಿಯಲ್ಲಿ ಆಸಕ್ತ ಸಂಸ್ಥೆಗಳಿಗೆ ದತ್ತು ನೀಡುವ ಅವಕಾಶ ಕಲ್ಪಿಸಿಕೊಡಲಾಗಿದೆ.

ಮೊದಲ ಹಂತದಲ್ಲಿ ಅರ್ಜಿ ಸಲ್ಲಿಸಿದ 6 ವಿವಿಧ ಸಂಸ್ಥೆಗಳಿಗೆ ಈಗಾಗಲೇ ಉದ್ಯಾನವನಗಳು ಮತ್ತು ಮೀಡಿಯನ್ಸ್ ಗಳಿಗೆ ಸಂಬಧಿಸಿದಂತೆ ದತ್ತು ನೀಡಲಾಗಿರುತ್ತದೆ. ಅದರಂತೆ ಮತ್ತೊಮ್ಮೆ ಆಸಕ್ತ ಸಂಸ್ಥೆಗಳಿಂದ ದತ್ತು ಪಡೆಯಲು ಅರ್ಜಿಯನ್ನು ಆಹ್ವಾನಿಸಿದ್ದು **ದಿನಾಂಕ:15-11-2024 ಸಂಜೆ 5:00** ಒಳಗಡೆ, ಉಪ ನಿರ್ದೇಶಕರು ತೋಟಗಾರಿಕೆ ರವರ ಕಛೇರಿ, ಅನೆಕ್ಸ್-03 ಕಟ್ಟಡ ನೆಲಮಹಡಿ, ಕೊಠಡಿ ಸಂಖ್ಯೆ 09, ಬಿಬಿಎಂಪಿ ಕೇಂದ್ರ ಕಚೇರಿಗೆ ಮನವಿಯನ್ನು ಸಲ್ಲಿಸಲು ಕೋರಿದೆ (ದೂರವಾಣಿ ಸಂಖ್ಯೆ 9535016189).

**ವಿಶೇಷ ಆಯುಕ್ತರು,**
**ಅರಣ್ಯ, ಪರಿಸರ ಮತ್ತು ಹವಾಮಾನ**
**ವೈಪರೀತ್ಯ ನಿರ್ವಹಣೆ,**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**